ಮುಚ್ಚಿದ ಲಾಟೀನನ್ನು ತೂರಿಸುತ್ತಿದ್ದೆ. ಆ ಸಮಯದಲ್ಲಿ ನೀವೇನಾದರೂ ನನ್ನನ್ನು ನೋಡಿರುತ್ತಿದ್ದರೆ ಖಂಡಿತ ಬಿದ್ದು ಬಿದ್ದು ನಗುತ್ತಿದ್ದೀರಿ! ಮುದುಕ ಎಚ್ಚೆತ್ತುಕೊಳ್ಳಬಾರದೆಂದು ನಾನು ಅಷ್ಟೊಂದು ಜಾಗರೂಕನಾಗಿರುತ್ತಿದ್ದೆ. ಒಬ್ಬ ಹುಚ್ಚ ಇಷ್ಟೊಂದು ಜಾಗರೂಕನಾಗಿರುತ್ತಾನೆಂದು ನೀವು ಭಾವಿಸುತ್ತೀರಾ? ಸಂಪೂರ್ಣವಾಗಿ ಒಳಗೆ ತೂರಿಕೊಳ್ಳಲು ನನಗೆ ಒಂದು ತಾಸೇ ಹಿಡಿಯುತ್ತಿತ್ತು. ನಂತರ, ಮಲಗಿರುವ ಮುದುಕ ನನಗೆ ಮುಖಾಮುಖಿಯಾಗುವಷ್ಟು ಹತ್ತಿರ ಸಮೀಪಿಸಿದಾಗ ನಾನು ಮುಚ್ಚಿದ ಲಾಟೀನನ್ನು ಒಂದಷ್ಟೇ ತೆರೆದು, ಬೆಳಕಿನ ಒಂದು ಸಣ್ಣ ರೇಖೆಯಷ್ಟೇ ಅವನ ಹದ್ದಿನ ಕಣ್ಣುಗಳ ಮೇಲೆ ಬೀಳುವಂತೆ ಮುಂದಿನ ಪ್ರತಿ ಏಳು ರಾತ್ರಿ ಗಮನಿಸಿದೆ. ಆದರೆ ಪೊರೆ ಆವರಿಸಿದ್ದ ಆ ನೀಲಿ ಕಣ್ಣುಗಳು ಯಾವಾಗಲೂ ಮುಚ್ಚಿಕೊಂಡೇ ಇರುತ್ತಿದ್ದವು. ನಾನು ಅಸಹಾಯಕನಾಗಿ ವಾಪಸ್ಸು ಬರುತ್ತಿದ್ದೆ. ನನಗೆ ಮುದುಕನ ಅನಿಷ್ಟ ಕಣ್ಣುಗಳ ಮೇಲಲ್ಲದೇ ವೈಯಕ್ತಿಕವಾಗಿ ಅವನ ಮೇಲೆ ಕಿಂಚಿತ್ತೂ ದ್ವೇಷವಿರಲಿಲ್ಲ. ಮತ್ತೆ ಬೆಳಗಾಗುತ್ತಿದ್ದಂತೆ ನಾನು ಧೈರ್ಯದಿಂದ ಅವನ ಕೋಣೆಯನ್ನು ಹೊಕ್ಕು ಅವನ ಸುಖ ದುಃಖವನ್ನು ವಿಚಾರಿಸಿ, ಅವನೊಡನೆ ತಮಾಷೆ ಮಾಡುತ್ತಾ, ಏನೆಲ್ಲಾ ಹರಟುತ್ತಾ ವಾಪಸ್ಸು ಬರುತ್ತಿದ್ದೆ. ನಾನು ಪ್ರತಿದಿನ ಕಳ್ಳನಂತೆ ಮಧ್ಯರಾತ್ರಿ ಮಲಗಿದ್ದ ಅವನನ್ನು ಗಮನಿಸುತ್ತಿದ್ದೆ ಎಂದು ಸಂಶಯಿಸಲು ಅವನಿಗೆ ಯಾವುದೇ ಕಾರಣಗಳಿರಲಿಲ್ಲ.

ಎಂಟನೆಯ ರಾತ್ರಿ ಮುದುಕನ ಕೋಣೆಯ ಬಾಗಿಲನ್ನು ತೆರೆದಾಗ ನಾನು ಎಂದಿನಂತೆಯೇ ತುಂಬಾ ಜಾಗರೂಕನಾಗಿದ್ದೆ. ಗಡಿಯಾರದ ಸೆಕೆಂಡು ಕೈ ಕೂಡ ನನ್ನದಗಿಂತಲೂ ತುಸು ಹೆಚ್ಚೇ ವೇಗದಿಂದ ಸರಿಯುತ್ತಿತ್ತೇನೋ! ಆ ಮೊದಲು ನನಗ್ಯಾವತ್ತೂ ನನ್ನ ಮಾನಸಿಕ ದೃಢತೆಯ ಪರಿಚಯವಾಗಿರಲಿಲ್ಲ ಎಂದು ಹೇಳಿಕೊಂಡರೆ ಅತಿಶಯೋಕ್ತಿ ಆಗಲಾರದು. ನನ್ನಲ್ಲುಂಟಾದ ಖುಷಿಯ ಭಾವನೆಗಳನ್ನು ಹತ್ತಿಕ್ಕಿಕೊಳ್ಳುವುದು ಸುಲಭವಾಗಿರಲಿಲ್ಲ. ಮೆಲ್ಲ ಮೆಲ್ಲಗೆ ಅವನ ಕೋಣೆಯ ಬಾಗಿಲು ತೆರೆಯುತ್ತಿರುವ ನನ್ನೊಳಗೆ ಅಡಗಿರುವ ಭಾವನೆಗಳ ಕಿಂಚಿತ್ತೂ ಅರಿವಿರದ ಪಾಪದ ಮುದುಕ! ನಾನು ಅರಿವಿಲ್ಲದೆ ಲೊಚಗುಟ್ಟಿದ್ದು ಅವನಿಗೆ ಕೇಳಿಸಿತೇನೋ! ಅವನು ಹಾಸಿಗೆಯ ಮೇಲೊಮ್ಮೆ ಬೆಚ್ಚಿ ಬಿದ್ದವನಂತೆ ಜೋರಾಗಿ ನರಳಿದ. ನಾನು ಅಲ್ಲಿಂದ ಕಾಲ್ಕೆಗೆದೆ ಎಂದು ನೀವು ಅಂದು ಕೊಂಡಿದ್ದೀರಲ್ಲಾ? ಇಲ್ಲ! ನಾನು ಅಲ್ಲಿಂದ ಕದಲಲಿಲ್ಲ. ಕಳ್ಳರ ಹೆದರಿಕೆಯಿಂದಾಗಿ ಮುದುಕ ಕೋಣೆಯ ಎಲ್ಲಾ ಕಿಟಕಿಗಳನ್ನು ಮುಚ್ಚಿದ್ದ. ಅಲ್ಲಿ ಗಾಢಾಂಧಕಾರ ತುಂಬಿಕೊಂಡಿತ್ತು. ಅವನಿಗೆ ನಾನು ಮೆಲ್ಲಗೆ ತೆರೆಯುತ್ತಿದ್ದ ಬಾಗಿಲು ಕಾಣಿಸಲು ಶಕ್ಯವಿರಲಿಲ್ಲ. ನಾನು ಸ್ವಲ್ಪ ಸ್ವಲ್ಪವೇ ಬಾಗಿಲನ್ನು ತೆರೆಯತೊಡಗಿದೆ.

ಬಾಗಿಲೊಳಗೆ ನಾನು ತಲೆಯನ್ನು ತೂರಿಸಿದೆ. ಇನ್ನೇನು ಲಾಟೀನಿಗೆ ಮುಚ್ಚಿದ್ದ ತಗಡನ್ನು ತೆರೆಯಬೇಕು ಎನ್ನುವಷ್ಟರಲ್ಲಿ ಅದು 'ಕರ ಕರ' ಸದ್ದು ಹೊರಡಿಸಿತು. ಮುದುಕ ಮಂಚದ ಮೇಲೆ ದಬಕ್ಕನೆ ಎದ್ದು ಕುಳಿತು "ಯಾ... ಯಾರು? ಯಾರಲ್ಲಿ?!" ಎಂದ ಕಂಪಿಸುವ ದನಿಯಲ್ಲಿ.

ನಾನು ಏನೂ ಮಾತನಾಡಲಿಲ್ಲ. ಸುಮಾರು ಒಂದು ಗಂಟೆ ನಾನು ಹಾಗೆಯೇ ನಿಂತುಕೊಂಡಿದ್ದೆ. ಅವನೂ ಮಲಗಲಿಲ್ಲ. ನಾನು ಹಿಂದಿನ ಏಳು ರಾತ್ರಿಗಳನ್ನು ಕಳೆದಂತೆ, ಅವನೂ ಮೈಯೆಲ್ಲಾ ಕಿವಿಯಾಗಿ ಕುಳಿತಂತಿತ್ತು.

ಅವನ ಕಡೆಯಿಂದ ಒಂದು ಸಣ್ಣ ನರಳಿಕೆ ಕೇಳಿಸಿತು. ಅದು ನೋವಿನ ಅಥವಾ ಶೋಕದ ನರಳಿಕೆಯಂತು ಖಂಡಿತವಾಗಿಯೂ ಆಗಿರಲಿಲ್ಲ. ಅದು ಜೀವಭಯದ ನರಳಿಕೆ ಎನ್ನುವುದರಲ್ಲಿ ಸಂಶಯವಿರಲಿಲ್ಲ. ಜೀವ ಭಯದಿಂದ ತತ್ತರಿಸಿ ಹೋಗಿರುವ ಮನುಷ್ಯನ ಆಳದಿಂದ ಹೊರಬಿದ್ದ ಆಕ್ರಂದನ. ಅದು ನನಗೆ ಬಹಳ ಚಿರಪರಿಚಿತ. ಎಷ್ಟೋ ರಾತ್ರಿಗಳಲ್ಲಿ ನಿದ್ದೆಗೆಟ್ಟು ಚಡಪಡಿಸುತ್ತಿದ್ದಾಗ ದಡಕ್ಕನೆ ಮಧ್ಯರಾತ್ರಿಗಳಲ್ಲಿ ಎದೆಯಾಳದಿಂದ ಪುಟಿದೆದ್ದು ಕಂಗೆಡಿಸುತ್ತಿದ್ದ ತಲ್ಲಣಗಳು ರೂಪು